ಬೆವಿಕಂ
BESCOM

# ಬೆಸ್ಕಾಂ ಸ್ನೇಹಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ–6, ಸಂಚಿಕೆ–3 ತ್ರೈಮಾಸಿಕ, ಅಕ್ಟೋಬರ್ – ಡಿಸೆಂಬರ್ 2019 ಪುಟಗಳು–12



## ಸಾರ್ವಜನಿಕರಲ್ಲಿ ವಿದ್ಯುತ್ ಸುರಕ್ಷತೆ ಕುರಿತು ಅರಿವು ಮೂಡಿಸಲು ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಬೀದಿ ನಾಟಕಗಳನ್ನು ಪ್ರದರ್ಶಿಸಲಾಗಿದೆ.























# Message from Managing Director



‘ಬೆಸ್ಕಾಂ’ ಸಿಬ್ಬಂದಿ–ಅಧಿಕಾರಿ ವರ್ಗದ ಆತ್ಮೀಯರೆ, ನಿಮ್ಮ ಸಂಸ್ಥೆಗೆ ನಾನು ಹೊಸ ವ್ಯವಸ್ಥಾಪಕ ನಿರ್ದೇಶಕನಾಗಿ ಇತ್ತೀಚೆಗಷ್ಟೇ ಅಧಿಕಾರ ಸ್ವೀಕರಿಸಿದ್ದೇನೆ.

ಸಂಸ್ಥೆಯ ಒಳಹೊರಗು ಸೇರಿದಂತೆ ಎಲ್ಲ ವಿವರಗಳ ಮಾಹಿತಿಯನ್ನು ಈಗಾಗಲೇ ಸಂಗ್ರಹಿಸಿದ್ದೇನೆ. ಬೆಸ್ಕಾಂ ಅನ್ನು ಇನ್ನಷ್ಟು ಗ್ರಾಹಕ ಸ್ನೇಹಿಯಾಗಿ ಮಾಡುವ ಅವಕಾಶಗಳು ನಮ್ಮ ಮುಂದೆ ಇವೆ. ಅವುಗಳನ್ನು ಬಳಸಿಕೊಂಡು ನಿಮ್ಮೆಲ್ಲರ ಸಹಕಾರದಿಂದ ಸಂಸ್ಥೆಯ ಸೇವೆಯನ್ನು ವಿಸ್ತರಿಸುವ ಗುರಿ ನನ್ನದಾಗಿದೆ.

ವಿದ್ಯುತ್ ಇಲ್ಲದೆ ದಿನನಿತ್ಯದ ಜೀವನವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ನಾವು ಅದನ್ನು ಅವಲಂಬಿಸಿದ್ದೇವೆ. ಈ ನಿಟ್ಟಿನಲ್ಲಿ ಗ್ರಾಹಕರಿಗೆ ಸುಗಮ ವಿದ್ಯುತ್ ಪೂರೈಕೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ. ವಿದ್ಯುತ್ ಪೂರೈಕೆಯಲ್ಲಿ ವಿವಿಧ ಕಾರಣಗಳಿಂದಾಗಿ ಹಲವಾರು ಅಡಚಣೆಗಳು ಎದುರಾಗಬಹುದು. ಆದರೆ ಅವುಗಳನ್ನು ಸವಾಲಾಗಿ ಸ್ವೀಕರಿಸಿ ನಾವು ನಮ್ಮ ಕರ್ತವ್ಯವನ್ನು ನಿಭಾಯಿಸಬೇಕಾಗಿರುತ್ತದೆ.

ಇತ್ತೀಚೆಗೆ ಗ್ರಾಹಕರಲ್ಲಿ ವಿದ್ಯುತ್ ಸುರಕ್ಷತೆ ಬಗ್ಗೆ ಅರಿವು ಮೂಡಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಡೆಸಿರುವುದು ಅಭಿನಂದನಾರ್ಹ ಸಂಗತಿ. ಸರ್ಕಾರಿ ಶಾಲಾ ಹಾಗು ಪಿಯು ವಿದ್ಯಾರ್ಥಿಗಳಲ್ಲಿ ಚಿತ್ರಕಲೆ/ಪ್ರಬಂಧ/ಭಾಷಣ ಸ್ಪರ್ಧೆಗಳನ್ನು ತಾಲ್ಲೂಕು ಮಟ್ಟದಲ್ಲಿ ನಡೆಸಲಾಗಿದ್ದು, ಯುವ ಮನಗಳಿಗೆ ವಿದ್ಯುತ್ ಸುರಕ್ಷತೆ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಲಾಗಿದೆ.

ಇದಲ್ಲದೆ, ಬೆವಿಕಂ ವ್ಯಾಪ್ತಿಯ ಪ್ರದೇಶಗಳಲ್ಲಿ ಓವರ್ ಹೆಡ್ ಲೈನ್‌ಗಳನ್ನು ಭೂಗತ ಕೇಬಲ್‌ಗಳಿಂದ ಪರಿವರ್ತಿಸುವ ಕಾರ್ಯವು ಪ್ರಾರಂಭಗೊಂಡಿದೆ. ಈ ಕಾರ್ಯವು ಯಶಸ್ವಿಯಾಗಿ ಪೂರ್ಣಗೊಳ್ಳುವ ವೇಳೆಗೆ ವಿದ್ಯುತ್ ಸರಬರಾಜಿನಲ್ಲಿ ಪ್ರಸ್ತುತ ಉಂಟಾಗುತ್ತಿರುವ ವ್ಯತ್ಯಯಗಳನ್ನು ದೊಡ್ಡ ಪ್ರಮಾಣದಲ್ಲಿ ಸರಿಪಡಿಸಿ, ಗ್ರಾಹಕರಿಗೆ ಗುಣಮಟ್ಟದ ಸೇವೆಯನ್ನು ನೀಡುವುದಲ್ಲದೆ, ಪ್ರಕೃತಿ ವಿಕೋಪಗಳಿಂದುಂಟಾಗುವ ವಿದ್ಯುತ್ ಅಡಚಣೆಗಳನ್ನು ಕ್ರಮೇಣ ತಡೆಗಟ್ಟಬಹುದಾಗಿದೆ.

ಕಂಪನಿಯಲ್ಲಿ ನಡೆಯುವ ಹಲವಾರು ಕಾರ್ಯ ಚಟುವಟಿಕೆಗಳು ಹಾಗು ಯೋಜನೆಗಳ ಬಗ್ಗೆ ತಿಳಿಸುವ ಉದ್ದೇಶದಿಂದ ಹಾಗು ಸಿಬ್ಬಂದಿ–ಅಧಿಕಾರಿ ವರ್ಗದವರಿಗೆ ತಮ್ಮ ಬರವಣಿಗೆಯ ಪ್ರತಿಭೆಯನ್ನು ಅಭಿವ್ಯಕ್ತ ಪಡಿಸುವ ಸಲುವಾಗಿ ಬೆವಿಕಂ, ಬೆಸ್ಕಾಂ ಸ್ನೇಹಿ ತ್ರೈಮಾಸಿಕ ಪತ್ರಿಕೆಯನ್ನು ಹೊರತರುತ್ತಿರುವುದು ಸಂತಸದ ವಿಷಯ.

ಹಬ್ಬಗಳನ್ನು ಹಿಂಡು ಹಿಂಡಾಗಿ ತರುವ ಕಾಲ ಪ್ರಾರಂಭವಾಗಿದೆ. ಹಬ್ಬಗಳ ಆಚರಣೆಯೊಂದಿಗೆ, ಸಕಾರಾತ್ಮಕ ಮನೋಭಾವ ಹಾಗೂ ಪರಿಶ್ರಮದೊಂದಿಗೆ ಬೆಸ್ಕಾಂ ಅನ್ನು ದೇಶದ ಪ್ರಥಮ ವಿದ್ಯುತ್ ವಿತರಣಾ ಕಂಪನಿಯನ್ನಾಗಿ ಮಾಡುವ ನಿಟ್ಟಿನಲ್ಲಿ ಕೆಲಸ ಮಾಡೋಣ.

ತಮ್ಮೆಲ್ಲರಿಗೂ ದಸರಾ, ದೀಪಾವಳಿ ಹಾಗು ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.

**ಶ್ರೀ ಎಂ. ಬಿ. ರಾಜೇಶ್ ಗೌಡ,**
ವ್ಯವಸ್ಥಾಪಕ ನಿರ್ದೇಶಕರು, ಬೆವಿಕಂ

# ಸಂಪಾದಕೀಯ

ಆತ್ಮೀಯರೆ,

ಮುಂಗಾರು ಮಳೆಯ ಆರಂಭದ ತಿಂಗಳುಗಳಾದ ಜೂನ್ ಮತ್ತು ಜುಲೈನಲ್ಲಿ ಬರೀ ಮೋಡ ಮತ್ತು ಬಿರು ಬಿಸಿಲನ್ನು ಕಂಡ ರಾಜ್ಯದ ಜನತೆ ಈ ಬಾರಿ ಬರಗಾಲ ಗ್ಯಾರಂಟಿ ಎಂದೇ ಆತಂಕಕ್ಕೆ ಒಳಗಾಗಿದ್ದರು.

ಆದರೆ ಜುಲೈ ಕೊನೆ ಹಾಗೂ ಆಗಸ್ಟ್ ಆರಂಭದ ದಿನಗಳಲ್ಲಿ ಬೀಳಲು ಪ್ರಾರಂಭವಾದ ಮಳೆಯನ್ನು ಕಂಡು ಬರಗಾಲ ಅಂತ್ಯಗೊಂಡು, ಬೆಳೆಯ ಸಮೃದ್ಧಿಯ ಕನಸು ಕಂಡರು.

ಆದರೆ ಕ್ರಮೇಣ ಮಳೆಯ ಬಿರುಸು ಹೆಚ್ಚಾಗಿ ಅತಿವೃಷ್ಟಿಯಿಂದ ರಾಜ್ಯದ ಹಲವಾರು ಭಾಗಗಳು ತತ್ತರಿಸಿ ಹೋದಾಗ ಉತ್ತಮ ಬೆಳೆ ಬೆಳೆಯುವ ಕನಸು ಕೂಡ ನುಚ್ಚುನೂರಾಯಿತು. ರಾಜ್ಯದ ಎಲ್ಲ ಜಲಾಶಯಗಳೂ ತುಂಬಿ ತುಳುಕಿದವು. ಇದರಿಂದ ಒಂದು ಆಶಾದಾಯಕ ವಿಚಾರವೆಂದರೆ ಜಲವಿದ್ಯುತ್ ಉತ್ಪಾದನೆ ಯೋಜನೆ ಇರುವ ಕಡೆ ನೀರಿನ ಕೊರತೆ ನಿವಾರಣೆಯಾಗಿರುವುದು.

ಇದರಿಂದಾಗಿ ವಿದ್ಯುತ್ ಕೊರತೆ ಸಾಕಷ್ಟು ಕಡಿಮೆಯಾಗಿ ಗ್ರಾಹಕರಿಗೆ ಸುಗಮ ವಿದ್ಯುತ್ ಪೂರೈಕೆಗೆ ಅವಕಾಶವಾಗುವ ಭರವಸೆ ಮೂಡಿದೆ. ಮಳೆಯ ಅಬ್ಬರದಿಂದಾಗಿ ಬೆಂಗಳೂರು ನಗರ ಸೇರಿದಂತೆ ಬೆಸ್ಕಾಂ ವ್ಯಾಪ್ತಿಯ ಹಲವು ಜಿಲ್ಲೆಗಳಲ್ಲಿ ಮರಗಳು ಉರುಳಿ ವಿದ್ಯುತ್ ಕಂಬಗಳು ಹಾಗೂ ತಂತಿಗಳು ಬಿದ್ದು ಬಹಳಷ್ಟು ಕಡೆ ವಿದ್ಯುತ್ ಪೂರೈಕೆ ಸ್ಥಗಿತಗೊಂಡು ಗ್ರಾಹಕರಿಗೆ ತೊಂದರೆಯಾದ ಸಂದರ್ಭಗಳು ಉಂಟಾಗಿವೆ.

‘ಬೆಸ್ಕಾಂ’ ಸಿಬ್ಬಂದಿ ಹಾಗೂ ಅಧಿಕಾರಿಗಳು ಇಂತಹ ಸನ್ನಿವೇಶಗಳನ್ನು ಸವಾಲಾಗಿ ಸ್ವೀಕರಿಸಿ ಅತ್ಯಂತ ಕಡಿಮೆ ಸಮಯದಲ್ಲಿ, ವ್ಯತ್ಯಯವನ್ನು ಸರಿಪಡಿಸಿ ವಿದ್ಯುತ್ ಪೂರೈಸಿರುವುದು ಎಲ್ಲರ ಅಭಿನಂದನಾರ್ಹ ಸಂಗತಿಯಾಗಿದೆ.

ಹಾಗೆಂದು ಎಲ್ಲರೂ ಕೈ ಕಟ್ಟಿ ಕೂರುವ ಕಾಲವೂ ಇದಲ್ಲ ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಮತ್ತೆ ಮಳೆ ಬೀಳುವ ಸಾಧ್ಯತೆ ಇದೆ. ಆಗ ಮಳೆ ಅನಾಹುತಗಳನ್ನು ಸೃಷ್ಟಿಸಬಹುದು, ನಾವು ಆ ಬಗ್ಗೆ ಜಾಗೃತರಾಗಿ ಇರಲೇಬೇಕಾಗುತ್ತದೆ. ಪರಿಸ್ಥಿತಿಗೆ ಅನುಗುಣವಾಗಿ ನಾವು ಸ್ಪಂದಿಸಬೇಕಾಗುತ್ತದೆ.

ಸಿಬ್ಬಂದಿ – ಅಧಿಕಾರಿಗಳು ತಮಗೆ ನೀಡಿದ ಉಪಕರಣಗಳೊಂದಿಗೆ ಸಜ್ಜಾಗಿರಬೇಕು. ಗ್ರಾಹಕರ ದೂರುಗಳನ್ನು ಆಧರಿಸಿ ಎದುರಾಗುವ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಒದಗಿಸಲು ತಯಾರಾಗಿರಬೇಕಾದುದು ನಮ್ಮ ಕರ್ತವ್ಯ.

ತಮ್ಮೆಲ್ಲರಿಗೂ ದಸರಾ, ದೀಪಾವಳಿ ಹಾಗೂ ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು.

ಸಂಪಾದಕರು
**ನಾಗರಾಜಯ್ಯ ಬಿ. ಎನ್.**
ಪ್ರಧಾನ ವ್ಯವಸ್ಥಾಪಕರು(ಗ್ರಾ. ಸಂ), ಬೆವಿಕಂ

# ನಮ್ಮ ಊರು, ನಮ್ಮ ಜಿಲ್ಲೆ – ಬೀದರ್

ಬೀದರ್ ಕರ್ನಾಟಕದ ತುತ್ತ ತುದಿಯಲ್ಲಿರುವ ಜಿಲ್ಲೆಯಾದರೂ ಶ್ರೀಮಂತ ಪರಂಪರೆಯನ್ನು ಹೊಂದಿದೆ.

ಬೀದರ್ ಎಂದರೆ ಬರಗಾಲದ ನಾಡು, ನೀರಿಲ್ಲದ ಊರು ಎಂಬ ಮಾತುಗಳಿವೆ. ಆದರೆ ಇದು ಸಮಶೀತೋಷ್ಣ ವಲಯದ ನಾಡು. ಪಕ್ಕದ ಕಲಬುರ್ಗಿ ಮತ್ತು ವಿಜಯಪುರ ಜಿಲ್ಲೆಗಳ ಬೇಸಿಗೆಯ ಬಿಸಿಯಾಗಲಿ, ನೀರಿಲ್ಲದ ಸ್ಥಿತಿಯಾಗಲಿ ಇಲ್ಲಿ ಇಲ್ಲ.

ಜಿಲ್ಲೆಯಾದ್ಯಂತ ಸತತವಾಗಿ ಹರಿಯುವ ಝುರಿಗಳಿವೆ, ಎಲ್ಲೆಲ್ಲೂ ಬಾವಿಗಳನ್ನು ಕಾಣಬಹುದು. ಹಾಗಾಗಿ ನೀರಿನ ಸಮೃದ್ಧಿ ಇದೆ. ಆದರೂ ಈ ಬಾರಿ ಮಳೆಯ ಕೊರತೆಯಿಂದ ಬರಗಾಲದ ಛಾಯೆ ಜಿಲ್ಲೆಯಲ್ಲಿ ಆವರಿಸಿದೆ. ಮಾಂಜ್ರಾ ಮತ್ತು ಕಾರಂಜ ನದಿಗಳಲ್ಲೂ ನೀರಿನ ಕೊರತೆ ಎದ್ದು ಕಾಣುತ್ತಿದೆ.

ಇತ್ತೀಚಿನವರೆಗೂ ಐದು ತಾಲ್ಲೂಕುಗಳನ್ನು ಮಾತ್ರ ಹೊಂದಿದ್ದ ಬೀದರ್ ಜಿಲ್ಲೆಗೆ ಈಗ ಹೊಸದಾಗಿ ಮೂರು ತಾಲ್ಲೂಕುಗಳನ್ನು ಸೇರ್ಪಡೆ ಮಾಡಿ ಒಟ್ಟು 8 ತಾಲ್ಲೂಕುಗಳನ್ನು ರಚಿಸಲಾಗಿದೆ.

ಬೀದರ್, ಬಸವಕಲ್ಯಾಣ, ಬಾಲ್ಕಿ, ಹುಮನಾಬಾದ್ ಮತ್ತು ಔರಾದ್ ಹಾಲಿ ಇರುವ ತಾಲ್ಲೂಕುಗಳು. ಔರಾದ್‌ನ ಕಮಲನಗರ, ಬಸವಕಲ್ಯಾಣದ ಹುಲಸೂರು ಹಾಗೂ ಹುಮನಾಬಾದ್‌ನ ಚಿಟಗುಪ್ಪ, ಹೋಬಳಿ ಕೇಂದ್ರಗಳನ್ನು ತಾಲ್ಲೂಕುಗಳನ್ನಾಗಿ ಮಾಡಿ ಅಧಿಕೃತವಾಗಿ ಪ್ರಕಟಿಸಲಾಗಿದೆ. ಈ ಜಿಲ್ಲೆಯ ಒಟ್ಟು ಜನಸಂಖ್ಯೆ ಸುಮಾರು 15 ಲಕ್ಷ ಎಂದು ಅಂದಾಜಿಸಲಾಗಿದೆ.

ಜೋಳ, ಮೆಕ್ಕೆ ಜೋಳ, ತೊಗರಿ, ಈರುಳ್ಳಿ, ಕಡಲೆಕಾಯಿ, ಒಣಮೆಣಸು ಇತ್ಯಾದಿಗಳು ಜಿಲ್ಲೆಯ ಪ್ರಮುಖ ಬೆಳೆಗಳು.

**ಜಿಲ್ಲೆಯ ಹಲವು ಪ್ರವಾಸಿತಾಣಗಳು ಜನಾಕರ್ಷಣೆಯ ಸ್ಥಳಗಳಾಗಿದ್ದು ವಿವರ ಹೀಗಿದೆ:**

**ಬೀದರಿನ ಕೋಟೆ :** ಇದರ ನಿರ್ಮಾಣವನ್ನು ಸುಲ್ತಾನ್ ಅಹಮ್ಮದ್ ಷಾ 1437ರಲ್ಲಿ ಪೂರೈಸಿದನು. ಈ ಕೋಟೆಯು ಅತ್ಯಂತ ಚಿತ್ತಾಕರ್ಷಕವಾಗಿದೆ. ಸಮುದ್ರ ಮಟ್ಟದಿಂದ ಸುಮಾರು 900 ಮೀಟರ್ ಎತ್ತರದ ಪ್ರಸ್ಥಭೂಮಿಯ ಮೇಲೆ ಸುಸ್ಥಿರವಾದ ಸ್ಥಳದಲ್ಲಿ ನೆಲೆಸಿದೆ. ಇದರ ಗೋಡೆಗಳನ್ನು ಅಖಂಡವಾದ ಉಸುಗು ಕಲ್ಲುಗಳಿಂದ ಕಟ್ಟಲಾಗಿದೆ.

**ಚೌಭಾರಾ ಸ್ಮಾರಕ:** ಬೀದರ್ ಪಟ್ಟಣದ ನಡುವೆ ನಾಲ್ಕು ರಸ್ತೆಗಳು ಕೂಡುವ ಸ್ಥಳದಲ್ಲಿ ಎತ್ತರವಾದ ಒಂದು ಸ್ಮಾರಕವಿದ್ದು ಅದನ್ನು 'ಚೌಭಾರಾ ಸ್ಮಾರಕ' ಎಂದು ಕರೆಯುತ್ತಾರೆ. ಬೀದರಿನ ಏಳು ಪ್ರವೇಶ ದ್ವಾರಗಳ ಕಮಾನುಗಳು ಸೇರುವ ಈ ಸ್ಥಳದಲ್ಲಿ 21 ಮೀಟರು ಎತ್ತರದ ಕಾವಲು ನಿರೀಕ್ಷಣಾ ಗೋಪುರವೇ ಈ ಚೌಭಾರಾ. ಬಹಮನಿ ರಾಜ್ಯದ ಪೂರ್ವದಲ್ಲಿ ನಿರೀಕ್ಷಣಾ ಕಟ್ಟಡವಾಗಿತ್ತು ಇದರ ಮೇಲೆ ನಿಂತು ಶತ್ರುಗಳ ಚಲನವಲನಗಳ ಮೇಲೆ ನಿಗಾ ಇಡುವುದಕ್ಕಾಗಿ ಕಟ್ಟಿದ ಗೋಪುರ ಇದು. ಇಂದಿಗೂ ಸುಸ್ಥಿತಿಯಲ್ಲಿರುವ ಈ ಗೋಪುರವನ್ನು ಒಳಗಿನಿಂದ ಮೆಟ್ಟಿಲುಗಳ ಮೂಲಕ ಏರಬಹುದು.

**ಚಾಂದನೀ ಚಬೂತರಾ–ಚಂದ್ರಕಟ್ಟೆ :** ಬೀದರಿನ ಅಭೇದ್ಯ ಕೋಟೆಯ ತಲಘಾಟ್ ದರವಾಜಾದ ಬಳಿ ಒಂದು ವಿನೂತನ ಕಟ್ಟಡವನ್ನು ಕಟ್ಟಲಾಗಿದೆ. ಇದನ್ನು ಚಂದ್ರಕಟ್ಟೆ ಅಥವಾ ಚಾಂದನೀ ಚಬೂತರಾ ಎಂದು ಕರೆಯುತ್ತಾರೆ. ಅದ್ಭುತ ಅನುಭವಗಳನ್ನು ನೀಡುವ, ಮಾತಿಗೆ ಮೀರಿದ, ಶಬ್ದಕ್ಕೆ ನಿಲುಕದ, ಬಣ್ಣಗಳಲ್ಲಿ ಹಿಡಿದಿಡಲಾಗದ ಚಂದ್ರೋದಯವನ್ನು ನೋಡುವುದಕ್ಕಾಗಿಯೇ ಬೀದರಿನ ಕೋಟೆಯಲ್ಲಿ ಕಟ್ಟಿಸಿದ ಸ್ಥಳವಿದು. ನಮ್ಮ ದೇಶದಲ್ಲಿ ಅನೇಕ ಕಡೆ ಸೂರ್ಯೋದಯ ಮತ್ತು ಸೂರ್ಯಾಸ್ತಮಾನಗಳನ್ನು ವೀಕ್ಷಿಸುವುದಕ್ಕಾಗಿಯೇ ಹಲವು ತಾಣಗಳನ್ನು





ನಿರ್ಮಿಸಿದ್ದಾರೆ. ಅದೇ ರೀತಿಯಲ್ಲಿ ಚಂದ್ರೋದಯವನ್ನು ನೋಡಿ ಆನಂದಿಸಲು ನಿರ್ಮಿಸಿರುವ ತಾಣಗಳು ವಿರಳ. ಆದರೆ ಚಬೂತರಿನ ಮೇಲೆ ಕುಳಿತು ಚಂದ್ರೋದಯವನ್ನು ನೋಡಿ ಉದಯದ ನಂತರ ಹಾಲಿನಂತಹ ಬೆಳಕನ್ನು ಚೆಲ್ಲುವ ನೋಟ ಒಂದು ವಿಶೇಷ ಅನುಭವ.

**ನಾನಕ್ ಝುರಿ ಮತ್ತು ಗುರುದ್ವಾರ :** ಬೀದರಿನ ನಿಸರ್ಗ ರಮ್ಯವಾದ ಮತ್ತೊಂದು ಸ್ಥಳ ನಾನಕ್ ಝುರಾ. ಇದು ಎರಡು ಬಂಡೆಗಳ ನಡುವೆ ಉದ್ಭವಿಸಿ ಹರಿದಿದೆ. ಸಿಖ್ ಮತ ಪ್ರವರ್ತಕರಾದ ಗುರುನಾನಕರ ಸಾನ್ನಿಧ್ಯದಿಂದ ಪವಿತ್ರವಾಗಿರುವ ಕ್ಷೇತ್ರವೇ ಈ ನಾನಕ ಝುರಾ.

ಗುರುನಾನಕರು 1511ರಲ್ಲಿ ತೀರ್ಥಯಾತ್ರೆ ಮತ್ತು ತತ್ವ ಪ್ರಚಾರಕ್ಕಾಗಿ ದಕ್ಷಿಣ ಭಾರತದ ಕಡೆ ಹೊರಟು ನಾಗಪುರ, ಓಂಕಾರೇಶ್ವರ, ನಾಂದೇಡ್ ಮತ್ತು ಭಾಗ್ಯನಗರಗಳ ಮಾರ್ಗವಾಗಿ ಬೀದರ್ ತಲುಪಿದರು.

ಗುರುನಾನಕರು ಇಲ್ಲಿಗೆ ಬಂದ ಸಂದರ್ಭದಲ್ಲಿ ಇಲ್ಲಿ ನೀರಿಲ್ಲದೆ ಪರಿತಪ್ತರಾಗಿದ್ದ ಜನರನ್ನು ನೋಡಿ ಮನನೊಂದು ತಮ್ಮ ಪಾದ ಸ್ಪರ್ಶದಿಂದ ಈ ನೀರಿನ ಚಿಲುಮೆಯನ್ನು ಸೃಷ್ಟಿಸಿದರೆಂದು ಪ್ರತೀತಿ ಇದೆ. ಈ ಝುರಿಯ ಅಂಚಿನಲ್ಲಿಯೇ ಗುರುನಾನಕರ ಪಾದಗಳ ಗುರುತೂ ಇದೆ. ಇದಕ್ಕಾಗಿಯೇ ಈ ಚಿಲುಮೆಗೆ 'ನಾನಕ ಝುರಿ' ಎಂಬ ಹೆಸರು ಬಂದಿದೆ ಎನ್ನಲಾಗಿದೆ.

ಈ ಝುರಿಯ ಸಮೀಪದಲ್ಲಿಯೇ ಒಂದು ಭವ್ಯವಾದ ಗುರುದ್ವಾರವನ್ನು ಕಟ್ಟಿಸಿದ್ದಾರೆ. ನಾನಕರ ಜಯಂತಿ ದಿವಸ ಇಲ್ಲಿ ಲಕ್ಷಾಂತರ ಭಕ್ತರು ಸೇರುತ್ತಾರೆ.

**ಪಾಪನಾಶ ಮಂದಿರ:** ಬೀದರಿನ ಪಶ್ಚಿಮದಲ್ಲಿರುವ ಉದಗೀರ ರಸ್ತೆಗೆ ಹೋಗುವ ದಾರಿಯಲ್ಲಿ ಒಂದು ತಗ್ಗಿನ ಪ್ರದೇಶದಲ್ಲಿ ಪಾಪನಾಶ ಕ್ಷೇತ್ರವಿದೆ. ಇದೊಂದು ಪ್ರಾಚೀನ ಪುಣ್ಯಸ್ಥಳ. ರಮಣೀಯ ಪರಿಸರದ ನಡುವೆ ಚಿಕ್ಕದೇವಾಲಯದಲ್ಲಿ ಶಿವಲಿಂಗವಿದೆ. ಎದುರಿಗೆ ತೀರ್ಥವಿದೆ. ಜನರು ಇದನ್ನು ರಾಮಲಿಂಗವೆಂದು ಕರೆಯುತ್ತಾರೆ.

ಈ ದೇವಾಲಯಕ್ಕೆ ಕೋಟಿ ರಾಮಲಿಂಗೇಶ್ವರ ಎಂಬ ಹೆಸರೂ ಇದೆ. ಇಲ್ಲಿಯ ಐತಿಹ್ಯವು ರಾಮಾಯಣದ ಕಾಲಕ್ಕೆ ಕೊಂಡೊಯ್ಯುತ್ತದೆ. ರಾಮ – ರಾವಣರ ಯುದ್ಧಾ ನಂತರ ರಾಮನೇ ಇಲ್ಲಿ ಶಿವಲಿಂಗವನ್ನು ಸ್ಥಾಪನೆ ಮಾಡಿದನಂತೆ. ಯಾವುದೇ ಜಾತಿ ಭೇದವಿಲ್ಲದೇ ಈ ದೇವಾಲಯದಲ್ಲಿ ಭಕ್ತರು ಶಿವಲಿಂಗವನ್ನು ಮುಟ್ಟಿ ತಾವೇ ಅರ್ಚನೆ ಸಲ್ಲಿಸಬಹುದು.

ಶಿವರಾತ್ರಿ ಮತ್ತು ಶ್ರಾವಣ ಮಾಸಗಳಲ್ಲಿ ವಿವಿಧೆಡೆಗಳಿಂದ ಭಕ್ತರು ಇಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಸೇರುತ್ತಾರೆ. ಹಾಗೆಯೇ ಇದು ಒಂದು ಸಾಂಸ್ಕೃತಿಕ ಕೇಂದ್ರವೂ ಆಗಿದೆ.

**ರೇಕುಳಗಿ ಬುದ್ಧ ವಿಹಾರ :** ಬೀದರಿಗೆ ದಕ್ಷಿಣದಲ್ಲಿರುವ ಮನ್ನಾಯಖೇಳದ ಸಮೀಪದಲ್ಲಿರುವ ರೇಕುಳಗಿ ಗುಡ್ಡದಲ್ಲಿ ಸುಂದರ ಪರಿಸರದಲ್ಲಿ ಭಗವಾನ್ ಬುದ್ಧನ ಮೂರ್ತಿಯು ಆಕರ್ಷಕವಾಗಿದೆ. ಜನರು ಈ ಸ್ಥಳವನ್ನು ಪಾಂಟ್ ಬುದ್ಧವಿಹಾರ ಎಂದು ಕರೆಯುತ್ತಾರೆ. ಪ್ರತಿ ವರ್ಷವೂ ಇಲ್ಲಿ ಭಾರೀ ಜಾತ್ರೆ ನಡೆಯುತ್ತದೆ.

**ಭವಾನಿ ಮಂದಿರ :** ಬೀದರ್ ನಗರದ ಉತ್ತರದಲ್ಲಿ ಸುಮಾರು 10 ಕಿ.ಮೀ. ಅಂತರದಲ್ಲಿ ಭವಾನಿ ಮಾತೆಯ ಪ್ರಸಿದ್ಧ ದೇವಾಲಯವಿದೆ. ಸುತ್ತಮುತ್ತಲಿನ ಭಕ್ತರು ಸದಾ ಕಾಲದಲ್ಲಿಯೂ ದೇವಿಯ ದರ್ಶನಕ್ಕೆ ಬರುತ್ತಾರೆ.

ಹುಮನಾಬಾದ್, ಭಾಲ್ಕಿ, ಬಸವ ಕಲ್ಯಾಣಗಳಲ್ಲಿಯೂ ಪುರಾತನವಾದ ಹಲವು ದೇವಾಲಯಗಳು ಜನಾಕರ್ಷಕವಾಗಿವೆ. ಕಲ್ಯಾಣ ಚಾಲುಕ್ಯ ಶೈಲಿಯ ಶ್ರೇಷ್ಠಮಟ್ಟದ ವಾಸ್ತು ಶಿಲ್ಪಗಳಿಂದ ಕೂಡಿದ ದೇವಾಲಯಗಳಿವೆ.

# ಹೆಸ್ಕಾಂ ವ್ಯಾಪ್ತಿಯಲ್ಲಿ ವಿದ್ಯುತ್ ಮರುಕಲ್ಪಿಸಲು ಬೆಸ್ಕಾಂ ಸಹಾಯ ಹಸ್ತ :

ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಭಾರಿ ಮಳೆ ಮತ್ತು ನೆರೆ ಹಾವಳಿಯಿಂದಾಗಿ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ (ಹೆಸ್ಕಾಂ) ವ್ಯಾಪ್ತಿಯಲ್ಲಿ ಹಾನಿಗೊಳಗಾದ ವಿದ್ಯುತ್ ಮೂಲಭೂತ ಸೌಲಭ್ಯಗಳನ್ನು ತುರ್ತಾಗಿ ಸರಿಪಡಿಸಿ ವಿದ್ಯುತ್ ಸಂಪರ್ಕವನ್ನು ಮರುಕಲ್ಪಿಸುವ ಕಾರ್ಯಕ್ಕೆ ನೆರವಾಗಲು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು (ಬೆಸ್ಕಾಂ) ನೆರವಿನ ಹಸ್ತ ಚಾಚಿದ್ದು, ಈ ನಿಟ್ಟಿನಲ್ಲಿ ನಾಲ್ಕು ಇಂಜಿನಿಯರುಗಳು ಮತ್ತು ಐವತ್ತು ಪವರ್‌ಮೆನ್‌ಗಳ ಎರಡು ತಂಡಗಳನ್ನು ರಚಿಸಿ ದಿನಾಂಕ 19.08.2019 ಹಾಗೂ 22.08.2019 ರಂದು ಕಳುಹಿಸಲಾಗಿತ್ತು.

ಹೆಸ್ಕಾಂ ಸಂಸ್ಥೆಯ ಕೋರಿಕೆಗೆ ಸ್ಪಂದಿಸಿ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯ ಏಳು ಜಿಲ್ಲೆಗಳಲ್ಲಿ ಹಾನಿಗೊಳಗಾದ ವಿದ್ಯುತ್ ಕಂಬಗಳು, ತಂತಿಗಳು ಮತ್ತು ಪರಿವರ್ತಕಗಳನ್ನು ತ್ವರಿತವಾಗಿ ದುರಸ್ತಿಗೊಳಿಸಿ ವಿದ್ಯುತ್ ಸರಬರಾಜನ್ನು ಮರುಕಲ್ಪಿಸುವ ಕಾರ್ಯದಲ್ಲಿ ಬೆಸ್ಕಾಂ ಪಡೆ ಕಾರ್ಯನಿರ್ವಹಿಸಿತು.







# ವಿದ್ಯುತ್ ಸುರಕ್ಷತಾ ಜಾಗೃತಿ ಅಭಿಯಾನ

ಬೆವಿಕಂ, ಸಾರ್ವಜನಿಕರಲ್ಲಿ ವಿದ್ಯುತ್ ಸುರಕ್ಷತೆ ಕುರಿತು ಜಾಗೃತಿ ಮೂಡಿಸಲು ಹಲವಾರು ಜಾಗೃತಿ ಕಾರ್ಯಕ್ರಮಗಳನ್ನು ವಿವಿಧ ಮಾಧ್ಯಮಗಳಾದ ಟಿವಿ, ರೇಡಿಯೋ, ದಿನಪತ್ರಿಕೆಗಳು, ಸಿನಿಮಾ ಥಿಯೇಟರ್‌ಗಳು, ಕರ ಪತ್ರಗಳ ವಿತರಣೆ ಇತ್ಯಾದಿಗಳ ಮೂಲಕ ನಡೆಸಿಕೊಂಡು ಬರುತ್ತಿದೆ.

ವಿದ್ಯುತ್‌ನಿಂದ ಉಂಟಾಗುವ ಅಪಾಯಗಳಿಗೆ ಮಕ್ಕಳು ಒಳಗಾಗುವ ಸಂಭವಗಳು ಹೆಚ್ಚಿದ್ದು, ಅವರಲ್ಲಿ ವಿದ್ಯುತ್ ಸುರಕ್ಷತೆಯ ಕುರಿತಂತೆ ಅರಿವು ಮೂಡಿಸಲು ಬೆವಿಕಂ ವಿಶೇಷ ಜಾಗೃತಿ ಅಭಿಯಾನವನ್ನು ಹಮ್ಮಿಕೊಂಡಿತ್ತು. ಸದರಿ ಅಭಿಯಾನದ ಅಂಗವಾಗಿ ಬೆವಿಕಂ ವ್ಯಾಪ್ತಿಗೆ ಒಳಪಡುವ ಜಿಲ್ಲೆಗಳಾದ ಬೆಂಗಳೂರು ನಗರ/ಗ್ರಾಮೀಣ, ರಾಮನಗರ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಸರ್ಕಾರಿ ಶಾಲೆ ಮತ್ತು ಪಿ.ಯು ಕಾಲೇಜುಗಳ ವಿದ್ಯಾರ್ಥಿಗಳಿಗೆ, ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ, ಆಗಸ್ಟ್ ಹಾಗು ಸೆಪ್ಟೆಂಬರ್ ಮಾಹೆಯಲ್ಲಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಿ ನಡೆಸಲಾಯಿತು.



**ಚಿತ್ರಕಲೆ ಸ್ಪರ್ಧೆ:**

ಬೆವಿಕಂ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ ಶಾಲೆ ಮತ್ತು ಪಿ.ಯು ಕಾಲೇಜುಗಳ ವಿವಿಧ ವಯೋವರ್ಗದ ವಿದ್ಯಾರ್ಥಿಗಳಿಗೆ ಚಿತ್ರಕಲೆ ಸ್ಪರ್ಧೆಯನ್ನು ದಿನಾಂಕ 02.08.2019 ರಿಂದ 09.08.2019 ರವರೆಗೆ ನಡೆಸಲಾಯಿತು.





**ಪ್ರಬಂಧ ಸ್ಪರ್ಧೆ:**

ಬೆವಿಕಂ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ ಶಾಲೆ ಮತ್ತು ಪಿ.ಯು ಕಾಲೇಜುಗಳ ವಿವಿಧ ವಯೋವರ್ಗದ ವಿದ್ಯಾರ್ಥಿಗಳಿಗೆ ತಾಲ್ಲೂಕು ಮಟ್ಟದ ಪ್ರಬಂಧ (ವಿದ್ಯುತ್ ಸುರಕ್ಷತೆ ಕುರಿತಂತೆ) ಸ್ಪರ್ಧೆಯನ್ನು ನಿಗಧಿತ ಸ್ಥಳಗಳಲ್ಲಿ ದಿನಾಂಕ 22.08.2019 ರಂದು ನಡೆಸಲಾಯಿತು.

**ಭಾಷಣ ಸ್ಪರ್ಧೆ:**

ಬೆವಿಕಂ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ ಶಾಲೆ ಮತ್ತು ಪಿ.ಯು ಕಾಲೇಜುಗಳ ವಿವಿಧ ವಯೋವರ್ಗದ ವಿದ್ಯಾರ್ಥಿಗಳಿಗೆ, ತಾಲ್ಲೂಕು ಮಟ್ಟದ ಭಾಷಣ (ವಿದ್ಯುತ್ ಸುರಕ್ಷತೆ ಕುರಿತಂತೆ) ಸ್ಪರ್ಧೆಯನ್ನು ನಿಗಧಿತ ಸ್ಥಳಗಳಲ್ಲಿ ದಿನಾಂಕ 12.09.2019 ರಂದು ನಡೆಸಲಾಯಿತು. ಎಲ್ಲಾ ಸ್ಪರ್ಧೆಗಳ ತಾಲ್ಲೂಕು ಮಟ್ಟದ ವಿಜೇತರಿಗೆ, ದಿನಾಂಕ 12.09.2019





ರಂದು ನಡೆದ ಭಾಷಣ ಸ್ಪರ್ಧೆಯ ದಿನದಂದೆ ಬಹುಮಾನ ವಿತರಣೆಯ ಕಾರ್ಯಕ್ರಮವನ್ನು ಬೆವಿಕಂ ವ್ಯಾಪ್ತಿಗೆ ಒಳಪಡುವ ಎಲ್ಲಾ ತಾಲ್ಲೂಕುಗಳಲ್ಲಿ ಏರ್ಪಡಿಸಲಾಗಿತ್ತು.

















ದಿನಾಂಕ 15.08.2019 ರಂದು ಬೆವಿಕಂ ನಿಗಮ ಕಛೇರಿಯ ಆವರಣದಲ್ಲಿ ಸ್ವಾತಂತ್ರ್ಯ ದಿನೋತ್ಸವನ್ನು ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ಬೆವಿಕಂನ ಉತ್ತಮ ಉಪವಿಭಾಗ/ವಿಭಾಗ/ವೃತ್ತಗಳನ್ನು ಗುರುತಿಸಿ ಸಂಬಂಧಪಟ್ಟ ಅಧಿಕಾರಿಗಳನ್ನು ಪ್ರಶಂಸಿಸಿ ಅಭಿನಂದಿಸಲಾಯಿತು.











## ಹುಟ್ಟುಹಬ್ಬದ ಶುಭಾಶಯಗಳು

2019ನೇ ವರ್ಷದ ಅಕ್ಟೋಬರ್, ನವೆಂಬರ್ ಹಾಗೂ ಡಿಸೆಂಬರ್ ತಿಂಗಳಿನಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಬೆಸ್ಕಾಂನ ಅಧಿಕಾರಿಗಳು / ಸಿಬ್ಬಂದಿಗಳಿಗೆ “ಬೆಸ್ಕಾಂ ಸ್ನೇಹಿ”ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

– ಸಂಪಾದಕೀಯ ಮಂಡಳಿ



## ಹಾರ್ದಿಕ ಬೀಳ್ಕೊಡುಗೆ

ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗೆ ಶ್ರಮಿಸಿ 2019ನೇ ವರ್ಷದ ಅಕ್ಟೋಬರ್, ನವೆಂಬರ್ ಹಾಗೂ ಡಿಸೆಂಬರ್ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು/ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹಾರ್ದಿಕ ಬೀಳ್ಕೊಡುಗೆ.

– ಸಂಪಾದಕೀಯ ಮಂಡಳಿ

# ಸಾಧಕರು ಇವರು : ಶ್ರೀ ಜಯಚಾಮರಾಜೇಂದ್ರ ಒಡೆಯರ್



ಶ್ರೀ ಜಯಚಾಮರಾಜೇಂದ್ರ ಒಡೆಯರ್

ಕರ್ನಾಟಕದ ಚರಿತ್ರೆಯಲ್ಲಿ 'ಮೈಸೂರು ಸಂಸ್ಥಾನವು' ಜನಪರ ಆಡಳಿತ, ಸಾಮಾಜಿಕ ನ್ಯಾಯ ಹಾಗೂ ಸಾಹಿತ್ಯ, ಸಂಗೀತ, ಸಂಸ್ಕೃತಿಯ ಪೋಷಣೆಗಾಗಿ ಮಹತ್ವದ ಸ್ಥಾನ ಪಡೆದಿದೆ.

ಮೈಸೂರು ಸಂಸ್ಥಾನ ಮಹಾತ್ಮ ಗಾಂಧೀಜಿಯವರ ದೃಷ್ಟಿಯಲ್ಲಿ 'ಮಾದರಿ' ರಾಜ್ಯವಾಗಿತ್ತು. ಮೈಸೂರು ಸಂಸ್ಥಾನವನ್ನು ಆಳಿದ ಬಹುಪಾಲು ಮಹಾರಾಜರು ಉದಾರಿಗಳಾಗಿದ್ದರು. ಸಾಹಿತ್ಯ ಸಂಗೀತದ ಒಲವುಳ್ಳವರಾಗಿದ್ದರು. ಪ್ರಜಾತಂತ್ರದ ಆಶಯಗಳಿಗೆ ಪೂರಕವಾಗಿ ರಾಜ್ಯಭಾರ ನಡೆಸುತ್ತಿದ್ದರು.

ಮೈಸೂರು ಅರಸರಲ್ಲೇ ನಾಲ್ವಡಿ ಕೃಷ್ಣರಾಜ ಒಡೆಯರ್ ಖ್ಯಾತನಾಮರು. ಇವರ ಜನಪರ ಕಾಳಜಿಗೆ ಆಕರ್ಷಿತರಾದ ಮಹಾತ್ಮ ಗಾಂಧೀಜಿಯವರು ಇವರನ್ನು 'ರಾಜರ್ಷಿ' ಎಂದು ಕೊಂಡಾಡಿದರು.

ಇಂತಹ ವಿಶಿಷ್ಟ ಪರಂಪರೆಯ ಮೈಸೂರು ಸಂಸ್ಥಾನದ ಕೊನೆಯ ಕೊಂಡಿ ಜಯಚಾಮರಾಜೇಂದ್ರ ಒಡೆಯರ್ ಅವರು. ಮೈಸೂರು ಸಂಸ್ಥಾನದ 25ನೇ ಮಹಾರಾಜರಾಗಿದ್ದ ಇವರು ಹುಟ್ಟಿದ್ದು ಜುಲೈ 18, 1919ರಂದು. ಜಯಚಾಮರಾಜೇಂದ್ರ ಒಡೆಯರ್ ಅವರು ಕೆಲಕಾಲ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆಗಿದ್ದರು.

ಯದುವಂಶದ ಈ ಕೊನೆಯ ದೊರೆ ಸಾಹಿತಿ, ಸಂಗೀತಜ್ಞ, ತತ್ವಜ್ಞಾನಿ ಮತ್ತು ಶ್ರೇಷ್ಠ ರಾಜನೀತಿಜ್ಞರಾಗಿ ಛಾಪು ಮೂಡಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ಇವರ ಜೀವಿತಾವಧಿಯ ಸಾಧನೆ ಸಿದ್ಧಿಗಳನ್ನು ಮೆಲುಕು ಹಾಕಲು ಮೈಸೂರಿನಲ್ಲಿ ಜನ್ಮಶತಮಾನೋತ್ಸವ ಸಮಾರಂಭ ಆಯೋಜಿಸಿತ್ತು. ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಚರಿತ್ರೆ ಮತ್ತು ಆಫ್ರಿಕನ್ ವಿಷಯಗಳಲ್ಲಿ ವಿಶೇಷ ಪರಿಣತಿ ಪಡೆದಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು ಸಾಹಿತ್ಯ–ಸಂಗೀತ ಕ್ಷೇತ್ರದಲ್ಲಿ ಅಪರಿಮಿತ ಆಸಕ್ತಿ ಹೊಂದಿದ್ದರು. ಸಂಸ್ಕೃತ ಭಾಷೆಯ ತತ್ವಗ್ರಂಥಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದರು. ಅವರು ಹಲವಾರು ಸಂಸ್ಕೃತ ಗ್ರಂಥಗಳನ್ನು ಅನುವಾದಿಸಿದ್ದಾರೆ. ಅಷ್ಟು ಮಾತ್ರವಲ್ಲದೆ ಸ್ವತಃ ಉತ್ತಮ ಲೇಖಕರೂ ಆಗಿದ್ದರು.

ಇವರು ರಚಿಸಿದ ಕೃತಿಗಳಲ್ಲಿ ದತ್ತಾತ್ರೇಯ ದಿ ವೇ ಅಂಡ್ ದಿ ಗೋಲ್. ದಿ ಗೀತಾ ಅಂಡ್ ಇಂಡಿಯನ್ ಕಲ್ಚರ್, ಭಾರತೀಯ ಸೌಂದರ್ಯ ಶಾಸ್ತ್ರದ ಹಲವು ಮುಖಗಳು, ದಿ ರಿಲಿಜನ್ ಅಂಡ್ ದಿ ಮ್ಯಾನ್ ಹಾಗೂ ಆತ್ಮ ಮತ್ತು ಬ್ರಹ್ಮ ಮುಖ್ಯವಾದವು.

ಸಾಹಿತ್ಯ ಮಾತ್ರವಲ್ಲ ಸಂಗೀತದಲ್ಲೂ ಇವರಿಗೆ ವಿಶೇಷ ಆಸಕ್ತಿ ಇತ್ತು. ವಿಶೇಷವಾಗಿ ಪಿಯಾನೋ ನುಡಿಸುವುದರಲ್ಲಿ ಪರಿಣತಿ ಪಡೆದಿದ್ದರು. ಪಾಶ್ಚಾತ್ಯ ಸಂಗೀತದಲ್ಲೂ ಆಸಕ್ತಿ ಹೊಂದಿದ್ದರು. ಪ್ರಪಂಚದ ಹೆಸರಾಂತ ಸಂಗೀತಗಾರರೊಂದಿಗೆ ಉತ್ತಮ ಒಡನಾಟ ಹೊಂದಿದ್ದರು. ವಿಶೇಷವೆಂದರೆ ಸ್ವಲ್ಪಮಟ್ಟಿಗೆ ಹಠಯೋಗವನ್ನೂ ಅಭ್ಯಾಸ ಮಾಡಿದ್ದರು.

ಶ್ರೀ ಜಯಚಾಮರಾಜೇಂದ್ರ ಒಡೆಯರ್ ಸಾಧನೆಗೆ ಬನಾರಸ್ ಹಿಂದೂ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿ ಗೌರವಿಸಿತು. ಅಣ್ಣಾಮಲೈ ವಿಶ್ವವಿದ್ಯಾಲಯದ ಡಿ.ಲಿಟ್ ಪದವಿಗೂ ಭಾಜನರಾಗಿದ್ದರು. ಲಂಡನ್‌ನ ಗಿಲ್ಡ್ ಹಾಲ್ ಸಂಗೀತ ಶಾಲೆಯ ಲೈಸನಿಯೇಟ್ ಪದವೀಧರರಾಗಿದ್ದ ಇವರು ಅಲ್ಲಿಯ ಟ್ರಿನಿಟಿ ಸಂಗೀತ ಶಾಲೆಯ ಗೌರವ ಫೆಲೊ ಕೂಡಾ ಆಗಿದ್ದರು.

ಇವರ ಅಗಾಧ ಪಾಂಡಿತ್ಯವನ್ನು ಗುರುತಿಸಿ ಆಸ್ಟ್ರೇಲಿಯಾದ ಕ್ವೀನ್ಸ್ ಲ್ಯಾಂಡ್ ವಿಶ್ವವಿದ್ಯಾಲಯ ಇವರಿಗೆ ಡಿ.ಲಿಟ್ ಪದವಿ ನೀಡಿ ಸನ್ಮಾನಿಸಿತು. ಬ್ರಿಟೀಷ್ ಸರಕಾರ ಇವರಿಗೆ 1945ರಲ್ಲಿ ಜಿ.ಸಿ.ಎಸ್.ಐ ಮತ್ತು 1948ರಲ್ಲಿ ಜಿ.ಸಿ.ಬಿ. ಬಿರುದುಗಳನ್ನು ನೀಡಿ ಗೌರವಿಸಿತು.

ತಮ್ಮ ಕೊನೆಯ ದಿನಗಳಲ್ಲಿ ಆಧ್ಯಾತ್ಮಿಕ ಗ್ರಂಥಗಳ ಶ್ರವಣದಲ್ಲಿ ಆಸಕ್ತರಾಗಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು 1974ರ ಸೆಪ್ಟೆಂಬರ್ 23ರಂದು ಬೆಂಗಳೂರಿನಲ್ಲಿ ನಿಧನರಾದರು.

# ಭಾರತರತ್ನ ಡಾ. ಸಿ. ಎನ್. ಆರ್. ರಾವ್

ವಿಶ್ವ ವಿಖ್ಯಾತ ಭಾರತೀಯ ವಿಜ್ಞಾನಿಗಳಲ್ಲೊಬ್ಬರಾದ ಡಾ.ಸಿ.ಎನ್.ಆರ್.ರಾವ್ (ಚಿಂತಾಮಣಿ ನಾಗೇಶ್‌ರಾಮಚಂದ್ರರಾವ್) ಅವರು 1934ರ ಜೂನ್30 ರಂದು ಬೆಂಗಳೂರಿನಲ್ಲಿ ಜನಿಸಿದರು. ಮೈಸೂರು ವಿಶ್ವವಿದ್ಯಾಲಯದಿಂದ ಬಿ.ಎಸ್ಸಿ ಪದವಿ, ಬನಾರಸ್ ಹಿಂದೂ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಹಾಗೂ ಪುರ್ಡ್ಯೂ ವಿಶ್ವ ವಿದ್ಯಾಲಯದಿಂದ ಪಿಹೆಚ್.ಡಿ.ಪಡೆದರು.

11 ವರ್ಷದ ವಿದ್ಯಾರ್ಥಿಯಾಗಿದ್ದಾಗಲೇ, ಡಾ. ರಾವ್ ಅವರ ಮೇಲೆ ಬಹಳವಾಗಿ ಪ್ರಭಾವ ಬೀರಿದವರು ವಿಶ್ವ ಪ್ರಸಿದ್ಧಿ ಪಡೆದ ಮತ್ತೊಬ್ಬ ಭಾರತೀಯ ಭೌತವಿಜ್ಞಾನಿ ಹಾಗೂ ನೊಬೆಲ್ ಪ್ರಶಸ್ತಿ ಪುರಸ್ಕೃತರಾದ ಡಾ. ಸರ್.ಸಿ.ವಿ.ರಾಮನ್ ಅವರು.

ಡಾ.ಸಿ.ಎನ್.ಆರ್.ರಾವ್ ಅವರು ಬೆಂಗಳೂರಿನ ವಿಶ್ವವಿಖ್ಯಾತ ಭಾರತೀಯ ವಿಜ್ಞಾನ ಸಂಸ್ಥೆ, ಕಾನ್ಪುರದ ಐ.ಐ.ಟಿ ಹಾಗೂ ಜಗತ್ತಿನ ಇನ್ನೂ ಅನೇಕ ಪ್ರತಿಷ್ಠಿತ ವಿಶ್ವ ವಿದ್ಯಾಲಯಗಳಲ್ಲಿ ಸೇವೆ ಸಲ್ಲಿಸಿ. ಪ್ರಸ್ತುತ ಬೆಂಗಳೂರಿನಲ್ಲಿರುವ ಜವಾಹರಲಾಲ್ ನೆಹರು ಉನ್ನತ ವಿಜ್ಞಾನ ಅಧ್ಯಯನ ಕೇಂದ್ರದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ರಸಾಯನ ಶಾಸ್ತ್ರದ ಸಾಲಿಡ್ ಸ್ಟೇಟ್ ಮತ್ತು ಮೆಟಿರಿಯಲ್ ವಿಭಾಗದಲ್ಲಿ ಮಾಡಿದ ಸಂಶೋಧನೆಗೆ ವಿಶ್ವದಾದ್ಯಂತ ಮನ್ನಣೆ ಗಳಿಸಿದ್ದಾರೆ. ಹಲವಾರು ಕೃತಕ ರಾಸಾಯನಿಕ ವಸ್ತುಗಳನ್ನು ಸಂಯೋಜಿಸುವಲ್ಲಿ ಮಹತ್ವದ ಪಾತ್ರ ವಹಿಸಿರುವ ಶ್ರೀ ಸಿ.ಎನ್.ಆರ್.ರಾವ್ ಅವರು ಅತಿವಾಹಕತೆ (ಸೂಪರ್‌ಕಂಡಕ್ಟಿವಿಟಿ) ಹಾಗೂ ನ್ಯಾನೋ ವಿಜ್ಞಾನ ಕ್ಷೇತ್ರದಲ್ಲಿಯೂ ಉನ್ನತ ಮಟ್ಟದ ಸಂಶೋಧನೆ ನಡೆಸಿದ್ದಾರೆ. ಇವರ 40ಕ್ಕೂ ಹೆಚ್ಚು ವಿಜ್ಞಾನ ಪುಸ್ತಕಗಳು ಪ್ರಕಟಣೆಗೊಳ್ಳುವುದರ ಜೊತೆಗೆ 1500ಕ್ಕೂ ಹೆಚ್ಚಿನ ಸಂಶೋಧನಾತ್ಮಕ ಲೇಖನಗಳು ದೇಶವಿದೇಶಗಳ ಪ್ರತಿಷ್ಠಿತ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.



ಡಾ. ಸಿ. ಎನ್. ಆರ್. ರಾವ್

ಡಾ. ಸಿ.ಎನ್.ಆರ್.ರಾವ್ ಅವರಿಗೆ ಸಂದ ಪ್ರಶಸ್ತಿಗಳು ಹಾಗೂ ಗೌರವಗಳಿಗೆ ಲೆಕ್ಕವಿಲ್ಲ. ಅವುಗಳಲ್ಲಿ ಬಹಳ ಮುಖ್ಯವಾದವುಗಳೆಂದರೆ – ಭಾರತ ಸರ್ಕಾರ ನೀಡುವ ಪ್ರತಿಷ್ಠಿತ ಭಾರತರತ್ನ ಪದವಿ, ಅಮೆರಿಕಾ ಸಂಯುಕ್ತ ಸಂಸ್ಥಾನದ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸ್ ಹಾಗೂ ಅಕಾಡೆಮಿ ಆಫ್ ಆರ್ಟ್ಸ್ ಅಂಡ್ ಸೈನ್ಸ್ ಸದಸ್ಯತ್ವದ ಗೌರವ, ಲಂಡನ್‌ನ ರಾಯಲ್ ಸೊಸೈಟಿಯ ಸದಸ್ಯತ್ವ, ಫ್ರಾನ್ಸ್ ಸರ್ಕಾರದ ಅತ್ಯುನ್ನತ ನಾಗರಿಕ ಪುರಸ್ಕಾರ, ಯುನೆಸ್ಕೊ, ಪ್ಯಾರಿಸ್‌ನಿಂದ ನೀಡಲಾಗುವ ಆಲ್ಬರ್ಟ್ ಐನ್‌ಸ್ಟೀನ್ ಚಿನ್ನದ ಪದಕ ಮತ್ತು ಕರ್ನಾಟಕ ಸರ್ಕಾರದ ಕರ್ನಾಟಕ ರತ್ನ ಪ್ರಶಸ್ತಿ. ಇದುವರೆಗೆ ರಾಷ್ಟ್ರೀಯ – ಅಂತರರಾಷ್ಟ್ರೀಯ ಮಟ್ಟದಲ್ಲಿ 30 ಕ್ಕೂ ಹೆಚ್ಚಿನ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್‌ಗಳನ್ನು ನೀಡಿವೆ.

ತಮ್ಮ ಪ್ರಾಥಮಿಕ ಶಿಕ್ಷಣವನ್ನು ಕನ್ನಡ ಮಾಧ್ಯಮದಲ್ಲಿ ಪಡೆದಿರುವ ಅವರು ಕನ್ನಡಿಗರೆಲ್ಲ ಹೆಮ್ಮೆಯಿಂದ ಬೀಗುವಂತೆ ವಿಶ್ವ ಮಟ್ಟದಲ್ಲಿ ವಿಜ್ಞಾನ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ಮಾಡಿದವರು.

# ಇವರು ನಮ್ಮ ಸಾಹಿತಿಗಳು : ಡಾ. ಎಂ. ಎಂ. ಕಲಬುರ್ಗಿ



ಡಾ. ಎಂ. ಎಂ. ಕಲಬುರ್ಗಿ

ಗ್ರಾಮೀಣ ಪರಿಸರದಲ್ಲಿ ಜನಿಸಿ, ಅಲ್ಲಿಯೇ ಬೆಳೆದು ಶಿಕ್ಷಣ ಹಾಗೂ ಸಾಹಿತ್ಯ ಎರಡೂ ಕ್ಷೇತ್ರಗಳಲ್ಲಿ ಹೆಸರು ಮಾಡಿರುವ ಸಾಹಿತಿಗಳಲ್ಲಿ ಡಾ.ಎಂ. ಎಂ.ಕಲಬುರ್ಗಿ ಅಪ್ರತಿಮ ವಿದ್ವಾಂಸ.

ಸರಳ ಜೀವನ ಹಾಗೂ ಉದಾತ್ತ ವಿಚಾರವಂತರಾದ ಅವರು ಜನಿಸಿದ್ದು 1938ರ ನವೆಂಬರ್ 28ರಂದು, ಇವರ ತಂದೆ ಕಲಬುರ್ಗಿ ಮಡಿವಾಳಪ್ಪ ಸಂಗಪ್ಪ, ತಾಯಿ ಗುರಮ್ಮ ಎರಗಲ್ಲ.

ಹುಟ್ಟೂರಿನಲ್ಲಿಯೇ ಪ್ರಾಥಮಿಕ ಶಿಕ್ಷಣ ಪಡೆದ ಅವರು ಪ್ರೌಢ ಹಾಗೂ ಕಾಲೇಜು ಶಿಕ್ಷಣವನ್ನು ವಿಜಾಪುರದಲ್ಲಿ ಮುಗಿಸಿದರು. 1962ರಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ ಕನ್ನಡದಲ್ಲಿ ಪ್ರಥಮ ರ್‍ಯಾಂಕ್ ಪಡೆದರು. ಬಿ.ಎ ಪದವಿಯಲ್ಲೂ ಪ್ರಥಮ ರ್‍ಯಾಂಕ್ ಗಳಿಸಿ ಉತ್ತೀರ್ಣರಾಗಿದ್ದರು.

1968ರಲ್ಲಿ "ಕವಿರಾಜ ಮಾರ್ಗ ಪರಿಸರದ ಕನ್ನಡ ಸಾಹಿತ್ಯ" ಮಹಾಪ್ರಬಂಧಕ್ಕೆ ಡಾಕ್ಟರೇಟ್ ದೊರೆಯಿತು.

ಹಲವು ಕಾಲೇಜುಗಳಲ್ಲಿ ಉಪನ್ಯಾಸಕ ಹಾಗೂ ಪ್ರಾಧ್ಯಾಪಕರಾಗಿ ದುಡಿದ ಅನುಭವ ಅವರದು, ಅವರ ಆಸಕ್ತಿಯ ವ್ಯಾಸಂಗಿಕ ವಿಚಾರಗಳೆಂದರೆ ಸಂಶೋಧನೆ, ಸಂಸ್ಕೃತಿ, ಇತಿಹಾಸ, ಪ್ರಾಚೀನ ಕನ್ನಡ ಸಾಹಿತ್ಯ, ಶಾಸನ ಶಾಸ್ತ್ರ, ಜಾನಪದ ವ್ಯಾಕರಣ, ಛಂದಸ್ಸು ಇತ್ಯಾದಿಗಳು. ಅವರ ಕೃತಿಗಳಲ್ಲಿ "ಶಾಸನದಲ್ಲಿ ಶಿವಶರಣರು", "ಶಾಸನ ವ್ಯಾಸಂಗ", "ಚನ್ನ ಬಸವಣ್ಣನವರ ಷಟ್‌ಸ್ಥಲ ವಚನ ಮಹಾ ಸಂಪುಟ;" "ಮಾರ್ಗ ಸಂಪುಟಗಳು" ಪ್ರಮುಖವಾದವುಗಳು. ಅವರ ಸಂಶೋಧನಾತ್ಮಕ ಕೃತಿಗಳಲ್ಲಿ "ಕವಿರಾಜ ಮಾರ್ಗ ಸಂಪುಟಗಳು", ಸಾಹಿತ್ಯ ಸಂಪಾದನೆ, ವಚನ ಸಾಹಿತ್ಯದ ಪ್ರಾಚೀನ ಆಕರ ಕೋಶ, ಕನ್ನಡ ಗ್ರಂಥ ಸಂಪಾದನ ಶಾಸ್ತ್ರ, ಕನ್ನಡದ ಹಸ್ತಪ್ರತಿ ಶಾಸ್ತ್ರ, ಮುಖ್ಯವಾದವುಗಳು.

ಐತಿಹಾಸಿಕ ಗ್ರಂಥಗಳಲ್ಲಿ ನಿಂಬ ಸಾಮಂತ ಚರಿತೆ, ಕೊಂಡಗುಳಿ ಕೇಶಿರಾಜನ ಕೃತಿಗಳು, ಬಸವಣ್ಣನವರನ್ನು ಕುರಿತ ಶಾಸನಗಳು ವಿಶೇಷ ಕೃತಿಗಳಾಗಿವೆ.

1996ರಲ್ಲಿ ಅವರ ಸಮಗ್ರ ಸಾಹಿತ್ಯಕ್ಕೆ ಪಂಪ ಪ್ರಶಸ್ತಿಯನ್ನು ಪಡೆದ ಡಾ. ಕಲಬುರ್ಗಿ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದೇಜಗೌ ಟ್ರಸ್ಟಿನ ವಿಶ್ವಮಾನವ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹತ್ತಾರು ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ,

ಜನಪದ ಸಾಹಿತ್ಯದ ಬಗ್ಗೆ ವಿಶೇಷ ಮಾಹಿತಿಗಳನ್ನು ಒಳಗೊಂಡ ಅವರ ಕೃತಿಗಳೆಂದರೆ "ಉತ್ತರ ಕರ್ನಾಟಕದ ಜಾನಪದ ಸಾಹಿತ್ಯ", "ಜಾನಪದ ಮಾರ್ಗ" 'ಕೆಟ್ಟಿತು ಕಲ್ಯಾಣ' (ನಾಟಕ), ಹಾಗೂ "ನೀರು ನೀರಡಿಸಿತ್ತು" (ಕವನ ಸಂಕಲನ).

ವಿವಿಧ ಪತ್ರಿಕೆಗಳು ಹಾಗೂ ನಿಯತಕಾಲಿಕಗಳಲ್ಲಿ ಮುನ್ನೂರಕ್ಕೂ ಹೆಚ್ಚು ಸಂಶೋಧನ ಲೇಖನಗಳನ್ನು ಪ್ರಕಟಿಸಿರುವ ಅವರು ಹಲವು ಕಡೆ ವಿಶೇಷ ಶೈಕ್ಷಣಿಕ ಉಪನ್ಯಾಸಗಳನ್ನು ನೀಡಿರುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನಿವೃತ್ತರಾಗಿದ್ದ ಡಾ.ಕಲಬುರ್ಗಿ ಕನ್ನಡ ನಾಡು ಕಂಡ ಅಪರೂಪದ ಸಾಹಿತಿ ಹಾಗೂ ಶಿಕ್ಷಣತಜ್ಞ,

# ಡಾ. ಗೊ. ರು. ಚನ್ನಬಸಪ್ಪ

ಜಾನಪದ ಸಾಹಿತಿಯಾಗಿ ನಾಡಿನಲ್ಲಿ ಪ್ರಸಿದ್ಧರಾಗಿರುವ ಡಾ. ಗೊ.ರು.ಚನ್ನಬಸಪ್ಪ ಅವರು ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕಿನ ಗೊಂಡೇದ ಹಳ್ಳಿಯಲ್ಲಿ 18-05-1930 ರಲ್ಲಿ ಜನಿಸಿದರು.

ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದ ಇವರು 18ನೇ ವಯಸ್ಸಿನಲ್ಲೇ ಶಿಕ್ಷಕ ವೃತ್ತಿಗೆ ಸೇರಿದರು. ಗಾಂಧೀ ಗ್ರಾಮದಲ್ಲಿ ಶಿಕ್ಷಣವನ್ನು ಪಡೆದಿರುವ ಇವರು ಭೂದಾನ ಚಳವಳಿ, ವಯಸ್ಕರ ಶಿಕ್ಷಣ, ಸೇವಾದಳಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಪತ್ರಿಕಾ ವೃತ್ತಿಗೂ ಅಂಟಿಕೊಂಡ ಗೊ.ರು.ಚ ಅವರು ಜಾನಪದ ಜಗತ್ತು, ಪಂಚಾಯತ್ ರಾಜ್ಯ, ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ ಮೊದಲಾದ ಪತ್ರಿಕೆಗಳಿಗೆ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ.

1992 ರಿಂದ 1995ರ ವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ 18ನೇ ಅಧ್ಯಕ್ಷರಾಗಿ ಅಪಾರ ಸೇವೆ ಸಲ್ಲಿಸಿದ್ದಾರೆ. ಮೂರು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಿದ್ದಾರೆ. ಕರ್ನಾಟಕ ಪ್ರಗತಿಪಥ, ಸಾಕ್ಷಿಕಲ್ಲು. ಬಾಗೂರು ನಾಗಮ್ಮ ಗ್ರಾಮ ಗೀತೆಗಳು, ಕರ್ನಾಟಕ ಜನಪದ ಕಲೆಗಳು, ಹೊನ್ನ ಬಿತ್ತೇವು ನೆಲಕ್ಕೆಲ್ಲ ಇತ್ಯಾದಿ ಮೌಲಿಕ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಅಮೃತ ನಿಧಿ, ದತ್ತಿನಿಧಿ ಸ್ಥಾಪನೆಗೆ ಯೋಜನೆಗಳನ್ನು ರೂಪಿಸಿದವರು.

ಗೊ.ರು.ಚ. ಅವರು ಅಧಿಕಾರಾವಧಿಯಲ್ಲಿ ಸಾಹಿತ್ಯ ಪರಿಷತ್ತಿನ ಸಭೆ ಸಮಾರಂಭಗಳಲ್ಲಿ ತಮಗೆ ನೀಡುತ್ತಿದ್ದ, ಸಭಾ ಭತ್ಯೆಯನ್ನು ಪರಿಷತ್ತಿಗೆ ಹಿಂದಿರುಗಿಸುತ್ತಿದ್ದರು. ಸಾಹಿತ್ಯ ಸಮ್ಮೇಳನಗಳ ರೀತಿಯಲ್ಲಿಯೇ ಊರೂರುಗಳಲ್ಲಿ ಸಾಹಿತ್ಯ, ಕಲೆ, ವಿಜ್ಞಾನ ಕ್ಷೇತ್ರಗಳ ಮಹತ್ವದ ವಿಷಯಗಳನ್ನು ಕುರಿತು ತೌಲನಿಕವಾಗಿ ಚರ್ಚೆ ಮಾಡುವ ರೀತಿಯಲ್ಲಿ ಸಮಾವೇಶವನ್ನು ಏರ್ಪಡಿಸಿದರು. ಹಲವಾರು ಮೌಲಿಕ ಕೃತಿಗಳನ್ನು ಪ್ರಕಟಿಸಿದರು.



ಡಾ. ಗೊ. ರು. ಚನ್ನಬಸಪ್ಪ

ಇವರು ರಾಜ್ಯ ಸರ್ಕಾರದೊಂದಿಗೆ ವ್ಯವಹರಿಸಿ ಪ್ರತಿ ವರ್ಷವೂ, ಜಿಲ್ಲಾ ಘಟಕಗಳಿಗೆ ಅನುದಾನ ನೀಡುವಂತೆ ಮಾಡಿದರು. ತಮ್ಮ ಅನಾರೋಗ್ಯವನ್ನೂ ಲೆಕ್ಕಿಸದೆ, ಪರಿಷತ್ತಿನ ಕಾರ್ಯ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಸಿಕೊಂಡದ್ದು ಇವರ ಕಾರ್ಯವಿಧಾನದ ವೈಶಿಷ್ಟ್ಯ, ನಾಡಿನಲ್ಲಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಗೆ ಕಾರಣೀಭೂತರಾಗಿ, ಅದೇ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದರು.

ಕನ್ನಡ ಸಾಹಿತ್ಯ ಪರಿಷತ್ತಿನ "2018ನೇ ಸಾಲಿನ ಶತಮಾನೋತ್ಸವದತ್ತಿ ಪ್ರಶಸ್ತಿ"ಗೆ ಭಾಜನರಾಗಿರುವ ಡಾ.ಗೊ.ರು.ಚನ್ನಬಸಪ್ಪ ಕನ್ನಡದ ಅಪರೂಪದ ಜಾನಪದ ವಿದ್ವಾಂಸ.

# (ಕಾರ್ಮಿಕರಿಂದ, ಕಾರ್ಮಿಕರಿಗಾಗಿ, ಕಾರ್ಮಿಕರಿಗೋಸ್ಕರ)
# ವಿದ್ಯುತ್ ಅಪಘಾತರಹಿತ ಸುರಕ್ಷಾ ಪ್ರಚಾರಗೀತೆ

ಆಲಿಸಿರಿ ಪಾಲಿಸಿರಿ ವಿದ್ಯುತ್
ಕ್ಷೇತ್ರದ ಕಾರ್ಮಿಕರೇ
ನಿಮ್ಮ ರಕ್ಷಣೆ, ನಿಮ್ಮಯ ಹೊಣೆಯು
ಸುರಕ್ಷಾ ನಿಯಮವ ಪಾಲಿಸಿರಿ..... ನೀವು
ಸುರಕ್ಷಾ ನಿಯಮವ ಪಾಲಿಸಿರಿ....

ಕಾರ್ಖಾನೆಗಳಿಗೆ ಬಲವನು ಕೊಡಲು
ರೈತರ ಬೆಳೆಗೆ ಜಲವನು ಕೊಡಲು
ಮನೆ ಮನೆಗಳಲಿ ದೀಪವ ಬೆಳಗಲು
ನಿತ್ಯವು ದುಡಿಯುವ ಕಾರ್ಮಿಕರೇ–ಹೊಯ್
ನಿತ್ಯವು ದುಡಿಯುವ ಕಾರ್ಮಿಕರೇ....

ಗುರುತಿನ ಕಾರ್ಡು, ಸಮವಸ್ತ್ರಗಳನು
ಧರಿಸದೇ ಕೆಲಸವ ಮಾಡದಿರಿ
ಸಮಯ ಪಾಲನೆ ಸಂಯಮದಿಂದಲೇ
ಸಕಲ ಕಾರ್ಯವ ಮಾಡುವಿರಿ.... ನೀವು
ಸಕಲ ಕಾರ್ಯವ ಮಾಡುವಿರಿ....

ಕಣ್ಣಿಗೆ ಕಾಣದ ಅಪಾಯದಂತಾ
ವಿದ್ಯುತ್ ಕೆಲಸವ ಮಾಡುವಿರಿ
ಪೂರ್ವಸಿದ್ಧತೆ ಇಲ್ಲದೆ ಹೋದರೆ
ಅಪಾಯದಲ್ಲಿ ಸಿಲುಕುವಿರಿ... ನೀವು
ಅಪಾಯದಲ್ಲಿ ಸಿಲುಕುವಿರಿ.....

ಮಾರ್ಗಮುಕ್ತತೆ ಪಡೆಯದೇ ನೀವು
ಕಂಬವ ಎಂದಿಗೂ ಏರದಿರಿ
ಕಂಬವ ಏರಲು ಸೇಫ್ಟಿ ಬೆಲ್ಟನು
ಹಾಕಲು ನೀವು ಮರೆಯದಿರಿ..... ಹೊಯ್
ಸೇಫ್ಟಿ ಬೆಲ್ಟನು ಹಾಕಲು ನೀವು ಮರೆಯದಿರಿ.



ರಚನೆ: ಎಸ್.ಸಿ. ಗಂಗಾಧರ ತಿಲಕ್
ಕಿರಿಯ ಇಂಜಿನಿಯರ್. O&M II
ಜಗಳೂರು ಉಪವಿಭಾಗ, ದಾವಣಗೆರೆ

# ಆರೋಗ್ಯವೇ ಭಾಗ್ಯ – ನೆಲ್ಲಿಕಾಯಿ

ದೇಹಕ್ಕೆ ಅಗತ್ಯವಾದ 'ಸಿ' ಜೀವಸತ್ವವು ಹೇರಳವಾಗಿರುವ ನೆಲ್ಲಿಕಾಯಿಯಲ್ಲಿ ಹಲವು ವಿಧಗಳಿವೆ.

ಬೆಟ್ಟನೆಲ್ಲಿ, ಕಿರುನೆಲ್ಲಿ, ನೆಲನೆಲ್ಲಿ ಇತ್ಯಾದಿ ವಿಧಗಳಿರುವ ನೆಲ್ಲಿಕಾಯಿಗಳಲ್ಲಿ ಗುಣಧರ್ಮ ಬೇರೆ ಬೇರೆಯಾಗಿಯೇ ಇದೆ.

ಪ್ರಸಿದ್ಧ ಆಯುರ್ವೇದ ಔಷಧಿ ತ್ರಿಫಲಗಳಲ್ಲಿ ನೆಲ್ಲಿಯೂ ಒಂದಾಗಿದೆ.

'ಒಂದು ಡಜನ್ ಕಿತ್ತಳೆ ಹಣ್ಣಿನಲ್ಲಿರುವ 'ಸಿ' ಜೀವಸತ್ವವು ಒಂದು ನೆಲ್ಲಿಕಾಯಿಯಲ್ಲಿದೆ' ಎಂದು ವೈದ್ಯ ವಿಜ್ಞಾನಿಯೊಬ್ಬರು ಹೇಳಿದ್ದಾರೆ. ಜೀವಸತ್ವದ ಪೂರ್ಣ ಲಾಭ ದೊರೆಯಬೇಕಾದರೆ ನೆಲ್ಲಿಕಾಯಿಯನ್ನು ಹಸಿಯಾಗಿಯೇ ತಿನ್ನಬೇಕು ಎನ್ನುತ್ತಾರೆ.

ನೆಲ್ಲಿಕಾಯಿ ಜೀರ್ಣಕಾರಿ, ರಕ್ತಶೋಧಕ, ಶಕ್ತಿದಾಯಕ ಜತೆಗೆ ಕೇಶವರ್ಧಕ ಕೂಡ ಆಗಿದೆ. ನರನಾಡಿಗಳಲ್ಲಿ ನವಚೈತನ್ಯವನ್ನು ಉಂಟುಮಾಡುತ್ತದೆ.



ಅಂಗಾಲು, ಅಂಗೈ ಹಾಗೂ ಕಣ್ಣು ಉರಿ ನಿವಾರಣೆಗೆ ನೆಲ್ಲಿಕಾಯಿಯನ್ನು ಬಳಸುತ್ತಾರೆ. ದೇಹದ ಹಲವು ಬಗೆಯ ಅನಾರೋಗ್ಯಗಳ ನಿವಾರಣೆಗೆ ಇದನ್ನು ವಿವಿಧ ರೀತಿಯಲ್ಲಿ ಬಳಕೆ ಮಾಡುತ್ತಾರೆ.

# ಬಾಳೆಹಣ್ಣು



ಹೆಚ್ಚು ಪೌಷ್ಟಿಕಾಂಶವಿರುವ ಬಾಳೆಹಣ್ಣುಗಳಲ್ಲಿ ಹಲವು ವಿಧಗಳಿವೆ.

ರಸಬಾಳೆ, ಏಲಕ್ಕಿಬಾಳೆ, ಪಚ್ಚಬಾಳೆ, ಬೂದಬಾಳೆ, ನೇಂದ್ರಬಾಳೆ, ಚಂದ್ರಬಾಳೆ ಇತ್ಯಾದಿ ಹಲವು ಬಗೆಯಿಂದ ಕೂಡಿದೆ. ಬೀಜಗಳಿಲ್ಲದ ಈ ಹಣ್ಣು, ಹಣ್ಣುಗಳಲ್ಲೇ ಶ್ರೇಷ್ಠವಾದುದು.

ಇದರಲ್ಲಿ ಸಕ್ಕರೆ, ಗ್ಲೂಕೋಸುಗಳು ಅಧಿಕವಾಗಿದ್ದು ಕೂಡಲೇ ರಕ್ತಗತವಾಗುವಂತಹ ಗುಣವನ್ನು ಹೊಂದಿದೆ. ಅಧಿಕ ಕ್ಯಾಲ್ಸಿಯಂ, ರಂಜಕ, ಕಬ್ಬಿಣ ಮತ್ತು ಇತರ ಖನಿಜಾಂಶಗಳಿಂದ ಕೂಡಿದೆ, ಹಾಗಾಗಿ ಬಾಳೆಹಣ್ಣನ್ನು ಪೂರ್ಣ ಆಹಾರ ಎನ್ನುತ್ತಾರೆ.

ದೇಹದ ಸಮತೋಲನವನ್ನು ಕಾಪಾಡುವ ಗುಣವನ್ನು ಹೊಂದಿದೆ. ಇದರ ಸೇವನೆಯಿಂದ ಆಹಾರವು ಜೀರ್ಣವಾಗಿ ಕರುಳಿನ ದೋಷ ಹಾಗೂ ಜಠರ ದೋಷಗಳು ನಿವಾರಣೆಯಾಗುವುವು.

ಬಾಳೆಗಿಡದ ಗಡ್ಡೆ, ಹೂವು ಮತ್ತು ದಿಂಡುಗಳನ್ನು ಔಷಧಿ ರೂಪದಲ್ಲಿ ಬಳಸುತ್ತಾರೆ. ಹಾಗಾಗಿ ಬಾಳೆ ಒಂದು ರೀತಿಯಲ್ಲಿ ಬಹೂಪಯೋಗಿ ಸಸ್ಯವಾಗಿದೆ.

# ಬೆವಿಕಂನ ಎಲ್ಲಾ ಉಪ ವಿಭಾಗಗಳಲ್ಲಿ ಪ್ರತಿ ತಿಂಗಳ ಮೂರನೇ ಶನಿವಾರದಂದು ಗ್ರಾಹಕ ಸಂವಾದ ಸಭೆಯನ್ನು ಯಶಸ್ವಿಯಾಗಿ ನಡೆಸಲಾಗುತ್ತಿದೆ.































## ಸಂಪಾದಕ ಮಂಡಳಿ

| | |
|---|---|
| **ಶ್ರೀ ಎಂ. ಬಿ. ರಾಜೇಶ್ ಗೌಡ,** ವ್ಯವಸ್ಥಾಪಕ ನಿರ್ದೇಶಕರು | ಅಧ್ಯಕ್ಷರು |
| **ಶ್ರೀ ಡಾ. ಆರ್. ಸಿ. ಚೇತನ್,** ನಿರ್ದೇಶಕರು (ಹಣಕಾಸು) | ಮುಖ್ಯ ಸಂಪಾದಕರು |
| **ಶ್ರೀ ಬಿ. ಕೆ. ಉದಯ್‌ಕುಮಾರ್,** ನಿರ್ದೇಶಕರು (ತಾಂತ್ರಿಕ) | ಮುಖ್ಯ ಸಂಪಾದಕರು |
| **ಶ್ರೀ ನಾಗರಾಜಯ್ಯ ಬಿ. ಎನ್,** ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ) | ಸಂಪಾದಕರು |
| **ಶ್ರೀ ಕೆ. ಬಲರಾಮ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ | ಸದಸ್ಯರು |
| **ಶ್ರೀ ರಾಮಚಂದ್ರ ರೆಡ್ಡಿ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಜಿ. ಗುರುಲಿಂಗಯ್ಯ,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಪ.ಜಾ.ತಿ ಮತ್ತು ಪ.ಪಂಗಡ ಕ್ಷೇಮಾಭಿವೃದ್ಧಿ ಸಂಘ | ಸದಸ್ಯರು |
| **ಶ್ರೀ ಎಂ. ರವೀಂದ್ರ,** ಕವಿಪ್ರನಿನಿ/ಎಸ್ಕಾಂಗಳ ಪ.ಜಾ.ತಿ. ಮತ್ತು ವರ್ಗದವರ ಅಧಿಕಾರಿಗಳ ಸಂಘ | ಸದಸ್ಯರು |
| **ಶ್ರೀ ಕುಮಾರ್ ಮುದ್ದಣ್ಣನವರ್,** ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮಾ ಇ. ಸಂಘ | ಸದಸ್ಯರು |


## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ/ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ


ವಿಳಾಸ: **ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.),ನಿಗಮ ಕಾರ್ಯಾಲಯ, ಬೆ.ವಿ.ಕಂಪನಿ, ಕೆ.ಆರ್. ವೃತ್ತ, ಬೆಂಗಳೂರು-560 001.**

ಇಮೇಲ್ ವಿಳಾಸ: **gmcr@bescom.co.in**


**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ: 1912**

**ಸಂದೇಶ ಕಳುಹಿಸಿ: 58888 ವೆಬ್‌ಸೈಟ್: www.bescom.org**


Printed at : Poornima Printers, Ph. 080 - 23359588